1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ನಂಜನಗೂಡು

ಸಿ.ಸಿ.ಸಂಖ್ಯೆ:677/2015

ಫಿರ್ಯಾದಿ : ಕವಲಂದೆ ಪೊಲೀಸ್ ಠಾಣೆ

ವಿರುದ್ಧ

ಆರೋಪಿ : ಇಬ್ರಾಹಿಂ ಬಿನ್ ಕಲೀಮುಲ್ಲ ಖಾನ್,
19 ವರ್ಷ, ದೊಡ್ಡಕವಲಂದೆ ಗ್ರಾಮ,
ನಂಜನಗೂಡು ತಾ:

: ದೋಷಾರೋಪಣೆ :

ಸಂದೀಪ್ ಎ. ನಾಯಿಕ್, 1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರಾದ ನಾವು ಆರೋಪಿತರಾದ ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:-

ದಿನಾಂಕ: 10-11-2013 ರಂದು ಬೆಳಿಗ್ಗೆ 10.15 ಗಂಟೆ ಸಮಯದಲ್ಲಿ ಕವಲಂದೆ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಆರ್.ಕೆ. ಹೋಟೆಲ್‌ಗೆ ಹೊಂದಿಕೊಂಡಂತಿರುವ ಸಾಕ್ಷಿ-08-ಕಲಿಮುಲ್ಲಖಾನ್ ರವರಿಗೆ ಸೇರಿದ ಮಳಿಗೆಯಲ್ಲಿ ಆರೋಪಿತರಾದ ನೀವು ಸಾರ್ವಜನಿಕರಿಗೆ ಸರ್ಕಾರದಿಂದ ಪಡಿತರ ಕಾರ್ಡ್‌ಗೆ ವಿತರಣೆಮಾಡುವ ನೀಲಿ ಸೀಮೆ ಎಣ್ಣೆಯನ್ನು ಸಾರ್ವಜನಿಕರಿಂದ ಲೀಟರ್‌ಗೆ ರೂ.38/- ಕ್ಕೆ ಖರೀದಿಸಿ, ನಿಮ್ಮ ಹೋಟೆಲ್‌ಗೆ ಊಟಕ್ಕೆ ಬರುವ ಲಾರಿಯವರಿಗೆ ಕಾಳಸಂತೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟಮಾಡಲು 06 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ 210 ಲೀಟರ್ ನೀಲಿ ಸೀಮೆ ಎಣ್ಣೆಯನ್ನು ಯಾವುದೇ ಲೈಸನ್ಸ್ ಪಡೆಯದೇ ಶೇಖರಿಸಿಟ್ಟಿದ್ದ ಕಾರಣ ಎಸೆನ್ಸಿಯಲ್ ಕಮಾಡಿಟೀಸ್ ಆ್ಯಕ್ಟ್ ಕಲಂ.3 ಮತ್ತು 7 ಮತ್ತು ಕರ್ನಾಟಕ ಅಗತ್ಯ ವಸ್ತುಗಳ ಲೈಸನ್ಸಿಂಗ್ ಆರ್ಡರ್ 1986 ಕಲಂ 3 ಮತ್ತು ಕೆರೋಸಿನ್ ರಿಸ್ಟ್ರಿಕ್ಷನ್ ಆಫ್ ಯೂಸ್ ಮತ್ತು ಫಿಕ್ಸೇಷನ್ ಸೀಲಿಂಗ್ ಪ್ರೈಸ್ ಆರ್ಡರ್ 1993 ನ್ನು ಉಲ್ಲಂಘಿಸಿದ ಕಾರಣ ಎಸೆನ್ಸಿಯಲ್ ಕಮಾಡಿಟೀಸ್ ಆ್ಯಕ್ಟ್ ಕಲಂ.7 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಮೇಲ್ಕಂಡ ಆಪಾದನೆಗೆ ಆರೋಪಿಗಳಾದ ನಿಮ್ಮನ್ನು ನ್ಯಾಯಾಲಯದ ಅಧಿವಿಚಾರಣೆಯನ್ನು ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ: 07.08.2017
ಸ್ಥಳ : ನಂಜನಗೂಡು

1ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ.
ನಂಜನಗೂಡು